# ಕಲ್ಪನೆ



ಭೋರ್ಗರೆಯುವ ಕಡಲಾದರೇನು, ನಾಲ್ಕಿಂಚು ಮೊಬೈಲಿನಲ್ಲಿ ಸೆರೆಯಾಗುವುದಿಲ್ಲವೇ ಎಂದು ಪ್ರಶ್ನಿಸುವಂತಿದೆ ಈ ದೃಶ್ಯ. ಬೆಳ್ನೊರೆಯ ಕಡಲಿಗೆ ಎದುರಾಗಿ ನಿಲ್ಲುವುದೊಂದು ಸಾಹಸವಾದರೆ, ಚಂದದ ದೃಶ್ಯವನ್ನೂ ಸನ್ನಿವೇಶವನ್ನೂ ಸಾಧ್ಯವಾದಷ್ಟೂ ಮೊಗೆದುಕೊಳ್ಳಬೇಕು ಎನ್ನುವುದೊಂದು ಆಸೆ. ಕಾಣದ ತೀರದಿಂದ ಬೀಸಿ ಬರುವ ಗಾಳಿಯನ್ನು ತಡೆಯಲೊಂದು ಕೊಡೆಯಿದೆ. ಸುಂದರ ನೆನಪುಗಳನ್ನು ಸೆರೆಹಿಡಿಯುವ ಧಾವಂತವನ್ನು ಬಿಂಬಿಸುವ ಚಿತ್ರವನ್ನು ನೋಡಿದಾಗ ನಿಮಗೆ ಕವಿತೆಯ ಸಾಲುಗಳೇನಾದರೂ ಹೊಳೆದವೇ?.
ನೀವು ಬರೆದ ಕವಿತೆಯು ನಮಗೆ ಜುಲೈ 15ರ ಒಳಗೆ ನಮಗೆ ತಲುಪಬೇಕು.

ಚಿತ್ರ: ಫಕ್ರುದ್ದೀನ್ ಎಚ್

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
**ಇ–ಮೇಲ್:** editormy@mayura.co.in